ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ಹಾಲಿನ ಉತ್ಪಾದಕರಿಗೆ ಕೊಡಬೇಕಾಗಿರುವ ಹಣವನ್ನು ಈ ಕೂಡಲೇ ಪಾವತಿ ಮಾಡುವಂತೆ ಸರ್ಕಾರವನ್ನು ಒತ್ತಾಯ ಪೂರ್ವಕವಾಗಿ ಆಗ್ರಹಪಡಿಸುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ,

ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಅಮೂಲ್ ಮಾದರಿಯ 566 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯಾಚರಣೆಯಲ್ಲಿರುತ್ತವೆ. ಮಂಡ್ಯ ಹಾಲು ಒಕ್ಕೂಟವು ಈ ಸಂಘಗಳಿಂದ ಪ್ರತಿದಿನ ಸರಾಸರಿ 1.02 ಲಕ್ಷ ಲೀಟರ್ ಹಾಲನ್ನು ಸಂಗ್ರಹಿಸುತ್ತಿದೆ ಮತ್ತು ದಿನಂಪ್ರತಿ 0.63 ಲಕ್ಷ ಲೀಟರ್ ಹಾಲನ್ನು ಮಾರಾಟ ಮಾಡುತ್ತಿದೆ. ಪ್ರಸ್ತುತ ರಾಜ್ಯದಲ್ಲಿ ಹಾಲು ಶೇಖರಣೆ ಹೆಚ್ಚಾಗಿರುವುದರಿಂದ, ಹಾಗೂ ಹಾಲು ಹಾಗೂ ಹಾಲು ಉತ್ಪನ್ನಗಳಿಗೆ ಬೇಡಿಕೆ ಇಲ್ಲದಿರುವುದರಿಂದ, ಸೂಕ್ತ ದರ ಸಿಗದೇ ಇರುವುದರಿಂದ ಅಲ್ಲದೇ ಇಂತಹುದೇ ಸನ್ನಿವೇಶ ದೇಶದ ಇತರೇ ರಾಜ್ಯಗಳಲ್ಲಿಯೂ ಇರುವುದರಿಂದ, ಅನಿವಾರ್ಯವಾಗಿ ಹೆಚ್ಚುವರಿ ಹಾಲನ್ನು ಹಾಲು ಉತ್ಪನ್ನಗಳಾಗಿ ಪರಿವರ್ತಿಸಿ ದಾಸ್ತಾನು ಮಾಡುತ್ತಿರುವುದರಿಂದ, ಹಾಲು ಉತ್ಪಾದಕರಿಗೆ ಹಣ ಪಾವತಿಯಲ್ಲಿ ವಿಳಂಬವುಂಟಾಗಿರುತ್ತದೆ.

ಪ್ರಸ್ತುತ ಮಂಡ್ಯ ಹಾಲು ಒಕ್ಕೂಟದಲ್ಲಿ 4 ಕೋಟಿ ರೂ.ಗಳ ಹಾಲು ಉತ್ಪನ್ನಗಳ ದಾಸ್ತಾನಿನಲ್ಲಿವೆ. ಮಂಡ್ಯ ಹಾಲು ಒಕ್ಕೂಟವು 7 ವಾರಗಳ ಹಣ ಬಿಡುಗಡೆ ಮಾಡಬೇಕಾಗಿದೆ. ಇದರ ಒಟ್ಟೂ ಮೊತ್ತ ಸುಮಾರು 3-60 ಕೋಟಿ ರೂ.ಗಳು. ದಿನಾಂಕ 5-2-1994ರಂದು ಕರ್ನಾಟಕ ಹಾಲು ಮಹಾಮಂಡಳಿಯು 70 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ಉಳಿದ ಹಣವನ್ನು ಶೀಘ್ರದಲ್ಲಿಯೇ ಬಿಡುಗಡೆಮಾಡಿ ಹಾಲು ಉತ್ಪಾದಕ ರೈತರಿಗೆ ಪಾವತಿಸುವಂತೆ ಸರ್ಕಾರವು ಮಂಡ್ಯ ಹಾಲು ಒಕ್ಕೂಟಕ್ಕೆ ನಿರ್ದೇಶನ ನೀಡಿದೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಫೆಬ್ರವರಿ 7,1994ರಂದು ವಿಧಾನಮಂಡಲದ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ.

ಶ್ರೀ ಡಿ. ಹಲಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಜಿ.ಎಸ್. ಶಿವನಂಜಪ್ಪನವರು ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಮಂಡಿಸಿರುವ ಸೂಚನೆಯನ್ನು ಅನುಮೋದಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೇ, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಿದ ಭಾಷಣವು ಈ ರಾಜ್ಯದ ಸರ್ವಜನರ ಕಲ್ಯಾಣವನ್ನು ಪ್ರತಿಬಿಂಬಿಸತಕ್ಕಂಥ ಭಾಷಣ ಮಾಡಿದ್ದಾರೆ. ಅವರು ಪ್ರಗತಿಪರವಾದಂಥ ಯೋಜನೆಗಳನ್ನು ಮುಂದಿಟ್ಟಿದ್ದಾರೆ. ಹಿಂದಿನ ವರ್ಷದಲ್ಲಾದ ಆಗುಹೋಗುಗಳ ಬಗ್ಗೆ ಮತ್ತು ಮುಂದೆ ಆಗಬೇಕಾಗಿರತಕ್ಕ ಯೋಜನೆಗಳ ಬಗ್ಗೆ ಪಕ್ಷಿನೋಟವನ್ನು ನಾವು ಒಟ್ಟಾರೆ ರಾಜ್ಯಪಾಲರ ಭಾಷಣದಲ್ಲಿ ತಿಳಿದುಕೊಳ್ಳಬೇಕಾಗಿದೆ.

5.30 ಪಿ.ಎಂ

ಮುಂದೆ ಬರುವಂತಹ ಯೋಜನೆಗಳನ್ನು ಇದರಲ್ಲಿ ಅಳವಡಿಸಿ ನಿಜವಾಗಿಯೂ ಕಾರ್ಯಗತ ಮಾಡಿದರೆ ಕರ್ನಾಟಕ ರಾಷ್ಟ್ರದಲ್ಲೇ ಒಂದು ಸ್ವರ್ಗವಾಗಬಹುದು, ಎನ್ನತಕ್ಕಂಥ

ಭಾವನೆ ನನಗಾಗಿದೆ. ದುರದೃಷ್ಟವಶಾತ್ 1993-94ರಲ್ಲಿ ಹಿಂದೆಂದೂ ಕಾಣದಂತಹ ನೈಸರ್ಗಿಕ ವಿಕೋಪಕ್ಕೆ ತುತ್ತಾಯಿತು. ಭೂಕಂಪ, ಅತಿವೃಷ್ಟಿ ಹೀಗಾಗಿ ಅನೇಕ ಮನೆಗಳನ್ನು ಜನತೆ ಮನೆಗಳನ್ನು ಕಳೆದುಕೊಂಡು ಮತ್ತು ಅನೇಕ ಜನರು ಅಸುನೀಗಿದರು. ಈ ನೈಸರ್ಗಿಕ ವಿಕೋಪಕ್ಕೆ ತುತ್ತಾದಂತಹ ಜನರಿಗೆ ತ್ವರಿತವಾಗಿ ಪರಿಹಾರವನ್ನು ಒದಗಿಸುವಂತಹ ಕಾರ್ಯದಲ್ಲಿ ನಮ್ಮ ಸರ್ಕಾರ ಬಹು ಬೇಗ ಕಾರ್ಯಕ್ರಮಗಳನ್ನು ಹಾಕಿಕೊಂಡು, ನೊಂದಂತಹ ಜನರಿಗೆ ಸಾಂತ್ವನ ನೀಡುವಂತಹ ಕಾರ್ಯಕ್ರಮದಲ್ಲಿ ಬಹಳ ಮುಂದಾಗಿದೆ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಈ ರಾಜ್ಯದ ಹಣಕಾಸಿನ ವಿಚಾರದಲ್ಲಿ ಈ ಒಂದು ಪ್ರಕೃತಿ ವಿಕೋಪದಿಂದ ಆಗಿರುವಂತಹ ಅನಾಹುತಗಳನ್ನು ಮತ್ತು ಅವರಿಗೆ ಕೊಟ್ಟಿರುವಂತಹ ಪರಿಹಾರಗಳನ್ನು ಲೆಕ್ಕ ಹಾಕಿದಾಗ, ರಾಜ್ಯದ ಹಣಕಾಸಿನ ಮೇಲೆ ಪರಿಣಾಮಕಾರಿಯಾದಂತಹ ಪರಿಸ್ಥಿತಿ ಎಲ್ಲಿ ಬೀಳುತ್ತದೋ ಎನ್ನುವಂತಹ ಭಯ ಇದ್ದರೂ ಕೂಡ ಇದು ಯಾವುದನ್ನು ಲೆಕ್ಕ ಮಾಡದೇ ಸತ್ತ ಜನರ ಕುಟುಂಬದವರಿಗೆ ಪರಿಹಾರ ಧನವಾಗಿ 20 ಸಾವಿರ ರೂ.ಗಳಿಂದ 1 ಲಕ್ಷ ರೂ. ಗಳವರೆಗೆ ಕೊಟ್ಟು, ಬಿದ್ದಂತಹ ಮನೆಗಳಿಗೆ 5 ಸಾವಿರದಿಂದ 10 ಸಾವಿರ ರೂಪಾಯಿಗಳವರೆಗೂ ಭಾಗಶಃ ಬಿದ್ದಂತಹ ಮನೆಗಳಿಗೆ 5 ಸಾವಿರ ರೂಪಾಯಿಗಳನ್ನು ತ್ವರಿತವಾಗಿ ಕೊಟ್ಟು ಜನರಿಗೆ ಪರಿಣಾಮಕಾರಿಯಾದಂತಹ ಪರಿಣಾಮವನ್ನು ಒದಗಿಸಿದೆ.

ಯೋಜನಾ ವೆಚ್ಚ ಇದರಿಂದ ಕಡಿಮೆಯಾಗಿಲ್ಲ. ಧೈರ್ಯದಿಂದ ಸರ್ಕಾರದವರು ಎಷ್ಟೇ ತೊಂದರೆ ಬರಲಿ ಭೂಕಂಪಕ್ಕೆ ತುತ್ತಾದಂತಹ ಜನರಿಗೆ ಮತ್ತು ಹೆಚ್ಚು ಮಳೆಯಾಗಿ ತೊಂದರೆ ಒಳಗಾದಂತಹ ಹಳ್ಳಿಗಳಿಗೆ ಪುನರ್ ವಸತಿ ಕಲ್ಪಿಸುವಲ್ಲಿ ಹಿಂದೆ ಬೀಳಲಿಲ್ಲ. ಸುಮಾರು 48 ಗ್ರಾಮಗಳನ್ನು ಪುನರ್ವಸತಿಗೆ ತೆಗೆದುಕೊಂಡು ಯೋಜನೆ ಮಾಡಿ ಅವರಿಗೆ ಬೇಕಾದಂಥ ಹಣವನ್ನು ಕೊಡಲಾಗಿದೆ. ಇಂಥ ಸಂದರ್ಭಗಳನ್ನು ನಾವು ಲೆಕ್ಕ ಹಾಕಿದರೆ ಇದುವರೆಗೂ ಯಾವುದೇ ಸರ್ಕಾರ ಕರ್ನಾಟಕದಲ್ಲಿ ಈ ಒಂದು ಪರಿಹಾರವನ್ನು ಒದಗಿಸುವಂತಹ ಮತ್ತು ನೊಂದಂತವರಿಗೆ ತಕ್ಷಣ ಸಾಂತ್ವನ ಕೊಡುವಂತಹ ಕಾರ್ಯಕ್ರಮಗಳನ್ನು ಹಿಂದೆ ಎಂದೂ ಯಾಧು ಮಾಡಲಿಲ್ಲ ಎಂದು ಹೇಳಿದರೂ ತಪ್ಪಾಗಲಾರದು. ಈ ವಿಚಾರದಲ್ಲಿ 48 ಗ್ರಾಮಗಳಿಗೆ ಪುನರ್ವಸತಿ ಕೊಡುವಾಗ ಸುಮಾರು 93.54 ಕೋಟಿ ರೂಪಾಯಿಗಳ ನೆರವನ್ನು ವಿಶ್ವ ಬ್ಯಾಂಕಿನ ನೆರವಿನ ಯೋಜನೆಯನ್ನು ತೆಗೆದುಕೊಳ್ಳಲಾಗಿದೆ. ಈ ಎಲ್ಲಾ ಕಾರ್ಯಗಳಿಗೆ ನೆರವಾದ ಭೂಕಂಪದಲ್ಲಿ ನೊಂದವರಿಗೆ ಪರಿಹಾರಕ್ಕಾಗಿ ಅನೇಕ ಸಂಘಸಂಸ್ಥೆಗಳು ಹಾಗೂ ಸಾರ್ವಜನಿಕರು, ಖಾಸಗಿಯವರು, ಸ್ವಪ್ರೇರಣೆಯಿಂದ ಯಾರು ಕೇಳದಿದ್ದರೂ ಕೂಡ ತಮ್ಮದೇ ದಂತಹ ನಿಧಿಯನ್ನು ಅರ್ಪಿಸಿದ್ದಾರೆ.

ನಾವು ಅಂತಹ ಸಂಘ ಸಂಸ್ಥೆಗಳಿಗೆ ಸಾರ್ವಜನಿಕರಿಗೆ ನಮ್ಮ ಧನ್ಯವಾದಗಳನ್ನು ನೀಡಬೇಕಾಗಿರತಕ್ಕಂಥಾದ್ದು ನಮ್ಮ ಆದ್ಯ ಕರ್ತವ್ಯ ಎಂದು ಕಾಣುತ್ತದೆ. ಜನತೆಗೆ ಒಳ್ಳೆಯ ಆಡಳಿತ ಕೊಡಬೇಕು, ಸ್ವಚ್ಛವಾಗಿರತಕ್ಕಂತಹ ಆಡಳಿತ ಕೊಡಬೇಕು, ಭ್ರಷ್ಟಾಚಾರವನ್ನು ನಿರ್ಮೂಲನ ಮಾಡಬೇಕು ಎನ್ನತಕ್ಕಂಥಾದ್ದು ಈ ಸರ್ಕಾರದ ಉದ್ದೇಶವಾಗಿದೆ. ಈ ಒಂದು ಸ್ವಚ್ಛ ಆಡಳಿತ ಭ್ರಷ್ಟಾರಹಿತವಾಗಿರತಕ್ಕಂತಹ ಒಂದು ಆಡಳಿತವನ್ನು ಕೊಡಬೇಕಾಗಿದ್ದರೆ ದಿಟ್ಟ ನಿಲುವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಈ ಹಂತದಲ್ಲಿ ಎಲ್ಲಾ ಇಲಾಖಾ ಮಂತ್ರಿಗಳೂ ತಮ್ಮ ಒಂದು ಕಾರ್ಯಚಟುವಟಿಕೆಗಳಲ್ಲಿ ತೊಡಗಿ ಫೈಲುಗಳನ್ನು ವಿಲೇವಾರಿ ಮಾಡತಕ್ಕಂಥಾದ್ದು ಆಗಿರತಕ್ಕಂತಹ ಕೆಲಸಗಳನ್ನು ಪರಿಶೀಲಿಸಿ, ಎಲ್ಲೆಲ್ಲಿ ಎಡವಿ ಬಿದ್ದಿದ್ದಾರೆ ಅದನ್ನು ಸರಿಪಡಿಸತಕ್ಕಂತಹ ಕೆಲಸದತ್ತ ದಾಪುಗಾಲು ಹಾಕಿದ್ದಾರೆ. ನಿಜವಾಗಿಯೂ ಕೂಡ ಜನರ ಒಂದು ಆಸೆಗಳಿಗೆ ಸ್ಪಂದನ ಕೊಡತಕ್ಕಂತಹ ವಿಚಾರದಲ್ಲಿ ಸರ್ಕಾರ ಒಂದು ಹೆಜ್ಜೆಯನ್ನು ಮುಂದೆ ಇಟ್ಟಿದೆ. ಎಷ್ಟೆ

ಎಡರು ತೊಡರುಗಳು ಬಂದಿದ್ದರೂ ಕೂಡ, ವಿರೋಧ ಪಕ್ಷದವರು ಹೇಳುತ್ತಿದ್ದರು, ನಿಮ್ಮ ನಿಮ್ಮಲ್ಲಿ ಕಿತ್ತಾಡುತ್ತಿದ್ದೀರಿ, ನೀವೇ ಸರಿಯಾಗಿಲ್ಲ ಸರ್ಕಾರ ಹೇಗೆ ನಡೆಸುತ್ತಿದ್ದಾರೆ ಎಂದು, ಇಷ್ಟೆಲ್ಲಾ ಆಪಾದನೆಗಳು ಇದ್ದರೂ ಕೂಡ ಸರ್ಕಾರ ಯಾವುದೇ ನಿಗದಿತ ಕಾರ್ಯಕ್ರಮಗಳನ್ನು ಯಾವುದೇ ಒಂದು ಯೋಜನೆಯಲ್ಲಿ ಹಿಂದೆ ಬಿದ್ದಿಲ್ಲ ಎಂದು ಹೇಳುವುದಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಕಾರಣ ಯೋಜನೆಗಳಿಗೆ ತಕ್ಕಂತೆ ಹಣವನ್ನು ಒದಗಿಸಿತಕ್ಕಂಥಾದ್ದು ಹಾಗೂ ಅದರ ಕಾರ್ಯ ವ್ಯಾಪ್ತಿಯಲ್ಲಿ ನಡೆದಿರತಕ್ಕಂತಹ ಕಾರ್ಯಗಳ ಸಮೀಕ್ಷೆಗಳನ್ನು ಮಾಡತಕ್ಕಂಥಾದ್ದು, ಪ್ರತಿ ತಿಂಗಳು ಏನು ಕೆಲಸ ನಡೆದಿದೆ ಮತ್ತು ಏನು ಮಾಡಬೇಕು ಎನ್ನುವಂತಹ ವಿಚಾರದಲ್ಲಿ ಸರ್ಕಾರದವರು ದಿಟ್ಟ ನಿಲುವನ್ನು ತೆಗೆದುಕೊಂಡು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಆಗಬೇಕಾಗಿರತಕ್ಕಂತಹ ಕೆಲಸದ ಕಡೆ ಮುಂದೆ ಹೆಜ್ಜೆ ಹಾಕಿದೆ. ಈ ವಿಚಾರದಲ್ಲಿ ಮಾನ್ಯ ರಾಜ್ಯಪಾಲರು ತಮಗೆ ಆಗಿರತಕ್ಕಂತಹ ಒಂದು ನಿಲುವನ್ನು ಸರ್ಕಾರದ ನಿಲುವನ್ನು ತಮ್ಮ ಭಾಷಣದ ಮೂಲಕ ಪ್ರತಿಬಿಂಬಿಸಿದ್ದಾರೆ.

ಈ ಭಾಷಣವನ್ನು ಪೂರ್ಣವಾಗಿ ಓದಿದನಂತರ ಎಲ್ಲಾ ವಿಚಾರಗಳೂ ಇದರಲ್ಲಿ ಅಡಕವಾಗಿವೆ ಎನ್ನುವಂತಾದ್ದನ್ನು ನಾನು ಹೇಳದೆ ವಿಧಿಯಿಲ್ಲ. ಸರ್ಕಾರದ ಆಡಳಿತವನ್ನು ಚುರುಕುಗೊಳಿಸಿ ಮತ್ತೆ ಸರಿಯಾದ ಮಾರ್ಗದಲ್ಲಿ ಸರ್ಕಾರ ನಡೆಯಬೇಕು, ಕಾರ್ಯಕ್ರಮಗಳು ಸರಿಯಾಗಿ ಆಗಬೇಕು ಎನ್ನುವಂತಹ ವಿಚಾರವನ್ನು ಮುಂದಿಟ್ಟು ಮುಂದಿನ ಹೆಜ್ಜೆಯನ್ನು ಹಾಕುತ್ತಾ ನಡೆದಿದೆ. 1993ನೇ ಸಾಲಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಚೆನ್ನಾಗಿ ಇವೆ, ಆದರೂ ಕೂಡ ಅಲ್ಲೊಂದು, ಇಲ್ಲೊಂದು ದಲಿತರ ಮೇಲೆ ಹಲ್ಲೆ, ಮಹಿಳೆಯರ ಮೇಲೆ ದೌರ್ಜನ್ಯಗಳನ್ನು ನಾವು ಅಲ್ಲಿ ಇಲ್ಲಿ ಕೇಳುತ್ತಿದ್ದೇವೆ. ಇವತ್ತು ನಡೆದಂತಹ ಚರ್ಚೆಯಲ್ಲಿ ದಲಿತರಿಗೆ ಆಗಿರತಕ್ಕಂತಹ ಅನ್ಯಾಯದ ಬಗ್ಗೆ ಆ ಕಡೆಯಲ್ಲಿ ಈ ಕಡೆಯಲ್ಲಿ ಚರ್ಚೆಯಾಗಿದೆ. ಇವತ್ತು ಪೊಲೀಸರ ವಿಚಾರದಲ್ಲಿ ಒಂದು ಮಾತು ನಾನು ಹೇಳಿದರೆ ತಪ್ಪಾಗಲಾರದು ಎಂದು ಕಾಣುತ್ತದೆ. ಈ ರಾಜ್ಯದ ಗೃಹಮಂತ್ರಿಯಾಗಿದ್ದಂತಹ ಹೆಚ್. ಸಿದ್ಧವೀರಪ್ಪನವರು ಒಂದು ಮಾತು ಹೇಳಿದ್ದರು. ಪೋಲೀಸ್ ಡ್ರೆಸ್ಸಲ್ಲಿ ಹೋಗಿ ನಾನು ವಿರೋಧಪಕ್ಷದ ಸದಸ್ಯನಿದ್ದೇನೆ, ನಿಮಗೆ ನಾನು ಒಳ್ಳೆಯ ಆಡಳಿತ ಕೊಡುವುದಕ್ಕೆ ಬಂದಿದ್ದೇನೆ, ಪೋಲೀಸ್ ಡ್ರೆಸ್‌ನಲ್ಲಿ ಖಾಕಿ ಬಟ್ಟೆ ಹಾಕಿಕೊಂಡು ಹೋದರೂ ಕೂಡ ಅಥವಾ ದೇವರೇ ಖಾಕಿ ಬಟ್ಟೆ ಹಾಕಿಕೊಂಡರೂ ಜನಗಳ ಎದುರಿಗೆ ಹೋದರೆ ಜನ ನಂಬದೆ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೂ ಈ ಹಂತದಲ್ಲಿ ಜನಗಳ ಮನೋಭಾವವನ್ನು ಬದಲಾಯಿಸತಕ್ಕಂತಹ, ಜನಗಳು ಪೋಲೀಸ್ ಇಲಾಖೆ ಮೇಲೆ ಇಟ್ಟಿರತಕ್ಕಂತಹ ಅನುಮಾನಗಳನ್ನು ಹೋಗಲಾಡಿಸಿ ಇಂತಹ ಅಹಿತಕರ ಘಟನೆಗಳು ನಡೆಯಬಾರದು ಎನ್ನುವಂತಹ ವಿಚಾರವನ್ನು ಪೋಲೀಸ್ಸವರಿಗೆ ತಿಳಿಸಿ ಪೋಲೀಸ್ಸವರಿಗೆ ಆದೇಶವನ್ನು ಸರ್ಕಾರ ಕೊಟ್ಟಿದೆ. ಆ ದೆಸೆಯಲ್ಲಿ ನಿಜವಾಗಿಯೂ ಕೂಡ ಪೋಲೀಸರೆ ಆ ಕೆಲಸ ಮಾಡುತ್ತಿದ್ದಾರೆ.

ಆರೋಪವನ್ನು ಮಾಡತಕ್ಕದ್ದು ಬಹಳ ಸುಲಭ. ಆದರೆ ನಿಜಾಂಶವನ್ನು ತಿಳಿಯತಕ್ಕದ್ದು ಬಹಳ ಕಷ್ಟವಾಗುತ್ತದೆ. ರಾಜಕೀಯವನ್ನು ಕೇವಲ ಹರಿಜನರ ಮೇಲೆ ದೌರ್ಜನ್ಯಗಳು ನಡೆದಿದೆ, ನಿಮ್ಮ ಸರ್ಕಾರ ಸರಿಯಿಲ್ಲ, ಅಥವಾ ಪೋಲೀಸ್ ಇಲಾಖೆ ಈ ರಾಜ್ಯದಲ್ಲಿ ಅಪ್ರಯೋಜಕವಾಗಿದೆ ಎಂಬ ಮಾತು ಪದೇ ಪದೇ ಬರುತ್ತಿದೆ. ಪೋಲೀಸರೂ ಕೂಡ ನಮ್ಮಂತೆಯೇ ಮನುಷ್ಯರು, ಈ ಪ್ರಜಾ ಪ್ರತಿನಿಧಿಗಳ ಸಹಾಯವೂ ಬೇಕಾಗುತ್ತದೆ. ಒಂದು ಕೇಸ್ನಲ್ಲಿ ಯಾರೂ ಸಾಕ್ಷಿ ಹಾಕುವುದಕ್ಕೆ ಬರದಿದ್ದರೆ ಪೋಲೀಸರು ಏನು ಮಾಡುತ್ತಾರೆ? 'ಬಿ' ರಿಪೋರ್ಟ್ ಕೊಡಬೇಕಾಗುತ್ತದೆ. ಆಗ ಪೋಲೀಸರು ಲಂಚ ತಿಂದು ಬಿ ರಿಪೋರ್ಟ್ ಕೊಟ್ಟರು ಎಂದು ಹೇಳುತ್ತಾರೆ. ಇದು ನಿಜವಾಗಿ ಪೋಲೀಸರ ಒಂದು ದುಃಸ್ಥಿತಿಯನ್ನು ತೋರಿಸುತ್ತದೆ. ಯಾವುದಾದರೂ ಒಂದು ಅಕ್ಸಿಡೆಂಟ್ ಆದಾಗ ಸಾರ್ವಜನಿಕರು ನೋಡಿಕೊಂಡು ಹೋಗುತ್ತಿರುತ್ತೇವೆ. ಪೋಲೀಸರು ಬಂದು ಈ ಮಹಜರ್ಗೆ ಸಹಿ ಹಾಕಿ ಎಂದರೆ ನಾವು ಯಾರೂ ಕೂಡ ಸಹಿ

ಹಾಕುವುದಿಲ್ಲ. ಏಕೆಂದರೆ ನಾವು ಅನೇಕ ಸಾರಿ ಕೋರ್ಟ್ಗೆ ಅಲೆಯಬೇಕಾಗುತ್ತದೆ. ಅಲ್ಲಿ ಇಲ್ಲಿ ಪೋಲೀಸರಲ್ಲೂ ಸ್ವಲ್ಪಮಟ್ಟಿಗೆ ದೋಷಗಳಿರಬಹುದು. ಅದನ್ನು ಸರಿಪಡಿಸಿಕೊಂಡು ಸರಿಯಾದ ರೀತಿಯಲ್ಲಿ ಪೋಲೀಸ್ ಇಲಾಖೆ ಹೋಗುವುದಕ್ಕೆ ವ್ಯವಸ್ಥೆ ಮಾಡಬೇಕು. ಹರಿಜನ ಗಿರಿಜನರ ಮೇಲೆ, ದುರ್ಬಲವರ್ಗದವರ ಮೇಲೆ, ಮಹಿಳೆಯಾರ ಮೇಲೆ ಅತ್ಯಾಚಾರ, ದೌರ್ಜನ್ಯಗಳು ನಡೆಯಬಾರದೆಂದು ಪೋಲೀಸರಿಗೆ ತಿಳಿಸಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಜವಾಬ್ದಾರಿಯನ್ನೂ ಅವರಿಗೆ ವಹಿಸಬೇಕು. ಈ ದೇಶದಲ್ಲಿ 1993ನೇ ಇಸವಿಯಲ್ಲಿ ಪೋಲೀಸ್ ಇಲಾಖೆಯನ್ನು ಸ್ವಲ್ಪಮಟ್ಟಿಗೆ ದೊಡ್ಡದು ಮಾಡಿದರು. ಇಲಾಖೆಯನ್ನು ದೊಡ್ಡದು ಮಾಡಿ 130 ಪೋಲೀಸ್ ಸ್ಟೇಷನ್ಗಳನ್ನು ತೆರೆದು ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಒದಗಿಸಿಕೊಟ್ಟಿದೆ. 1994-95ನೇ ಇಸವಿಯಲ್ಲಿ ಮಹಿಳೆಯರ ಮೇಲೆ ಆಗುವಂಥ ಅತ್ಯಾಚಾರಗಳ ಬಗ್ಗೆ ಮಹಿಳೆಯರೇ ತನಿಖೆ ನಡೆಸಿದರೆ ಅನುಕೂಲವಾಗಬಹುದು, ಅನೇಕ ಮಹಿಳೆಯರು ತಮಗೆ ಆದಂಥ ತೊಂದರೆಗಳನ್ನು ಪಬ್ಲಿಕ್‌ನಲ್ಲಿ ಹೇಳುವುದಕ್ಕೆ ಅಥವಾ ಗಂಡಸರ ಎದುರಿಗೆ ಹೇಳುವುದಕ್ಕೆ ಹಿಂಜರಿಯುತ್ತಿದ್ದಾರೆ. ಆದ್ದರಿಂದ ಅವರ ಕಲ್ಯಾಣಕ್ಕಾಗಿ ಮಹಿಳಾ ಪೋಲೀಸರನ್ನು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಮಂಜೂರು ಮಾಡಬೇಕೆಂದು ವಿಶೇಷ ಯೋಜನೆಯನ್ನು ಸರ್ಕಾರ ಹಾಕಿಕೊಂಡಿದೆ. ಸಿ.ಓ.ಡಿ.ಯಲ್ಲಿ ಮಹಿಳಾ ವಿಶೇಷಾಧಿಕಾರಿಗಳನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಮಹಿಳಾ ಪೋಲೀಸರು ತಮ್ಮ ಕರ್ತವ್ಯವನ್ನು ಸರಿಯಾಗಿ ನಡೆಸಿದರೆ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಕಡಿಮೆಯಾಗಿ ಅವರಿಗೆ ರಕ್ಷಣೆ ಸಿಕ್ಕಬಹುದು. ಈ ಸಮಾಜದಲ್ಲಿ ನಾವೂ ಕೂಡ ಮಾನ ಮರ್ಯಾದೆಯಿಂದ ಜೀವನ ಮಾಡಬಹುದೆಂದು ಭಾವನೆ ಅವರಲ್ಲಿ ಬರುತ್ತದೆ. ಯಾರು ಏನೇ ಹೇಳಿದರೂ ಪೋಲೀಸ್ ಇಲಾಖೆಯನ್ನು ಬೆಂಬಲಿಸುವುದಾಗಲಿ, ಅಥವಾ ನೀವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ ಎಂದು ಬೆನ್ನು ತಟ್ಟುವಂಥ ಮಾತನಾಡಲು ಯಾರೂ ಕೂಡ ಮುಂದೆ ಬರುತ್ತಿಲ್ಲ. ಕಾರಣ ಇಷ್ಟೆ. ಸಮಾಜದಲ್ಲಿ ಪೂರ್ಣವಾಗಿ ತಮ್ಮದೇ ಆದಂಥ ವ್ಯಕ್ತಿತ್ವವನ್ನು ಸಂಪಾದನೆ ಮಾಡಿದಂಥ ಪೋಲೀಸರಲ್ಲಿದ್ದಾರೆ ಮತ್ತು ಆ ಇಲಾಖೆಯಲ್ಲಿ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿರುವಂಥ ಅಧಿಕಾರಿಗಳಿದ್ದಾರೆ. ಕೇವಲ ಜೀವನೋಪಸ್ಕರವೇ ಪೋಲೀಸ್ ಇಲಾಖೆಯನ್ನು ಸೇರಿರುವ ಜನರಿಂದ ಅಲ್ಲಿ ಇಲ್ಲಿ ಸ್ವಲ್ಪಮಟ್ಟಿಗೆ ತಪ್ಪುಗಳಾಗುತ್ತಿರಬಹುದು. ಆದರೆ ಇಡೀ ಇಲಾಖೆಯನ್ನೇ ದೂಷಿಸುವಂಥ ಪ್ರವೃತ್ತಿ ಇತ್ತೀಚೆಗೆ ಬಹಳವಾಗಿ ಹೆಚ್ಚುತ್ತಿದೆ. ಇದು ನಿಜಕ್ಕೂ ಒಂದು ದುರದೃಷ್ಟ. ಇದನ್ನೆಲ್ಲಾ ಹೋಗಲಾಡಿಸಿ ಜನರಿಗೆ ಸರಿಯಾದ ರಕ್ಷಣೆ ಕೊಡಬೇಕು, ಅದರಲ್ಲೂ ಮಹಿಳೆಯರಿಗೆ ವಿಶೇಷವಾದ ರಕ್ಷಣೆಯನ್ನು ಕೊಡಬೇಕೆಂದು ವಿಶೇಷವಾದ ಯೋಜನೆಯನ್ನು ರೂಪಿಸಿರುವ ಸರ್ಕಾರದ ನೀತಿಯನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ನೋಡಬಹುದಾಗಿದೆ.

ಆದುದರಿಂದ ಇನ್ನು ಮುಂದೆ ಸರಿಯಾದ ರಕ್ಷಣೆ ಜೊತೆಗೆ ಮಹಿಳಾ ಅಧಿಕಾರಿಗಳು ಇವುಗಳನ್ನು ನೋಡತಕ್ಕ ಜವಾಬ್ದಾರಿ ಹೆಚ್ಚಾಗಿ ಪೋಲೀಸರಿಗೆ ವಹಿಸಿ ಅವರ ಮೇಲೆ ಉಸ್ತುವಾರಿ ಕ್ರಮವನ್ನು ಇಲಾಖೆಯ ಮಂತ್ರಿಗಳು ಮತ್ತು ಮೇಲಾಧಿಕಾರಿಗಳು ತೆಗೆದುಕೊಳ್ಳುವುದಕ್ಕೆ ಸರಿಯಾದ ಒಂದು ಮಾರ್ಗದರ್ಶನವನ್ನು ಅವರು ಕೊಟ್ಟಿದ್ದಾರೆ. ಸಮಾಜದ ದುರ್ಬಲ ವರ್ಗಗಳವರಿಗೂ ಕೂಡಾ ರಕ್ಷಣೆ ಸಿಗಬೇಕೆನ್ನುವ ದೃಷ್ಟಿಯಿಂದ 1993ರಲ್ಲಿ ಹೊಸದಾಗಿ 9 ಅಗ್ನಿಶಾಮಕ ಠಾಣೆಗಳನ್ನು ಮಂಜೂರು ಮಾಡಲಾಗಿದೆ. ಹಂತಹಂತವಾಗಿ ಎಲ್ಲಾ ತಾಲ್ಲೂಕುಗಳಿಗೆ ಕೂಡಾ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭ ಮಾಡುವುದಕ್ಕೆ ಉದ್ದೇಶಿಸಲಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಶಿವನಂಜಪ್ಪನವರು ತಮ್ಮ ಭಾಷಣವನ್ನು ನಾಳೆ ಮುಂದುವರಿಸಬಹುದು. ಈಗ ವಿಧೇಯಕಗಳನ್ನು ತೆಗೆದುಕೊಳ್ಳೋಣ.

ಶ್ರೀ ಜಿ.ಎಸ್. ಶಿವನಂಜಪ್ಪ : ಆಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಲೇ ಮುಗಿಸಲಿ. ಏನೂ ಸಾಧನೆ ಇಲ್ಲಿದಾಗ ಭಾಷಣ ಮಾಡುವುದಕ್ಕೆ ಏನು ಇದೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರು ಸುತ್ತಿ ಬಳಸಿ ಮಾತನಾಡುತ್ತಿದ್ದಾರೆ. ಇದರಲ್ಲಿ ಏನೂ ಇಲ್ಲ ಎಂದು ಅವರಿಗೆ ಗೊತ್ತಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾಧನೆಯ ಸಂವತ್ಸರದಲ್ಲಿ ಎಲ್ಲಾ ಬಿಡುಗಡೆ ಮಾಡಲಾಗಿದೆ. ನಮ್ಮ ಆಡಳಿತ ಪಕ್ಷದಲ್ಲಿ ಏನೂ ಕೆಲಸ ಆಗಿಲ್ಲ. ಸುಮ್ಮನೆ ನಮ್ಮ ವಕೀಲರನ್ನು ಇಲ್ಲಿ ಇಕ್ಕಟ್ಟಿಗೆ ಸಿಕ್ಕಿಸಿ ಪಾಪ ಅವರನ್ನು ಬಲಿಪಶು ಮಾಡುವುದು ಧರ್ಮವೇ? ಇಲ್ಲಿ ಏನೂ ಇಲ್ಲ, ತಾವು ಮುಗಿಸಿಬಿಡಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಶಿವನಂಜಪ್ಪನವರಿಗೆ ಏನೂ ಹೇಳುವುದಕ್ಕೆ ಮನಸ್ಸು ಇಲ್ಲ. ಆದರೂ ಈ ಕೆಲಸ ಕೊಟ್ಟು ಈಗ ಸಂಸದೀಯ ಸಚಿವರು ಅವರು ಹೇಳುವುದನ್ನೂ ಕೇಳದೇ ಭಾಷಣ ನಿಲ್ಲಿಸಿ ಎಂದು ಹೇಳುತ್ತಿದ್ದಾರೆ. ಸರ್ಕಾರದ ಸಾಧನೆ ಎಂದರೆ ಅದು ಕೈಗನ್ನಡಿ ಇದ್ದಂತೆ. ಆದರೆ ಇಲ್ಲಿ ಶಿವನಂಜಪ್ಪನವರಿಗೆ ಅದು ಕಾಣದೇ ಮನಸ್ಸಿಲ್ಲದೇ ಮಾತನಾಡುತ್ತಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ : 11 ಗಂಟೆಯಿಂದ ಐದೂವರೆ ಗಂಟೆಯವರೆಗೂ ಅವರೇ ವೇಳೆಯನ್ನು ತೆಗೆದುಕೊಂಡರು. ಈ ಕಡೆಯಿಂದ ಪತ್ರಿಕೆಯಲ್ಲಿ ನಾಳೆ ಒಂದಿಷ್ಟು ಬರಲಿ ಎಂದರೆ ಅದಕ್ಕೆ ನೀವು ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಷ್ಟ ನಮಗೆ ಅರ್ಥವಾಯಿತು.

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ : ಅವರು ಮಾತನಾಡಿದ್ದು ನಾಳೆ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡದಾಗಿ ಬರಬೇಕೆಂದು ಅವರೇ ಹೇಳಿದ್ದಾರೆ. ಈಗ ಅವರು ಮಾತನಾಡಿದ್ದು ಪತ್ರಿಕೆಗಳಲ್ಲಿ ಬರಬೇಕೇ ಬೇಡವೇ?

ಶ್ರೀ ಬಿ.ಹೆಚ್. ಬನ್ನಿಕೋಡ್ : ಪತ್ರಿಕೆಗಳಲ್ಲಿ ಬರಲಿ ಎಂದು ಹೇಳುತ್ತಿದ್ದೇವೆ. ದಿನಾ ಈ ರಾಜ್ಯದ ಜನ ನಿಮ್ಮದನ್ನೇ ಕೇಳುತ್ತಾರೆ. ನಿಮ್ಮ ಭಿನ್ನಮತದ ಬಗ್ಗೆ, ಅದರ ಕಾಟದ ಬಗ್ಗೆ ದಿನಾ ಪತ್ರಿಕೆಯಲ್ಲಿ ಬಂದಿದೆ. ಇದು ನಿಮ್ಮ ಸರ್ಕಾರದ ಜಗಳ. ಇವತ್ತು ವಿರೋಧಪಕ್ಷದಲ್ಲಿ ಅಂತಹದ್ದು ಏನೂ ಇಲ್ಲ. ಇದು ಕುರ್ಚಿಗಾಗಿ ನಡೆದಿರತಕ್ಕ ನಿಮ್ಮ ಜಗಳ.

ಶ್ರೀ ಜಿ.ಎಸ್. ಶಿವನಂಜಪ್ಪ : ನನಗೆ ಇನ್ನೂ ಒಂದು ಗಂಟೆ ಕಾಲಾವಕಾಶ ಬೇಕು. ಅವರು ಕುಳಿತುಕೊಳ್ಳುವುದಾದರೆ ನಾವು ಮಾತನಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ರಾತ್ರಿ ಎಂಟುಗಂಟೆಯಾದರೂ ನಾವು ಕುಳಿತುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 12 ಅಂಶಗಳ ಸೂತ್ರದ ಹೊಂದಾಣಿಕೆಯಿಂದ ಪ್ರಾರಂಭ ಆಗಲಿ.

ಶ್ರೀ ಜಿ.ಎಸ್. ಶಿವನಂಜಪ್ಪ : ನಿಮಗೆ ಯಾವುದೇ ಸೂತ್ರ ಇಲ್ಲವಲ್ಲಾ.

ಅಧ್ಯಕ್ಷರು : ತಾವು ನಾಳೆ ತಮ್ಮ ಭಾಷಣ ಮುಂದುವರೆಸಿ.